ಆಗಬೇಕಾಗಿದೆ. ಅದರ ಬಗ್ಗೆ ವರದಿಯೂ ಬಂದಿದೆ. ಆದರೆ ವರದಿ ಬರುವ ಮುಂಚೆಯೇ ಕೆಲವು ಪ್ರಸ್ತಾವನೆಗಳು compound wall ಇತ್ಯಾದಿಗಳ ಬಗ್ಗೆ ಮಾಡುವುದಕ್ಕೆ ಬಂದಿದ್ದರಿಂದ ಒಂದು ಲಕ್ಷ ರೂಪಾಯಿಯನ್ನು 2008–09ನೇ ಸಾಲಿನಲ್ಲಿ ಬಿಡುಗಡೆ ಮಾಡಿದ್ದೇವೆ ಮತ್ತು ಆ ಕೆಲಸ ಆಗಬೇಕೆಂದು ಸೂಚನೆ ಕೊಟ್ಟಿದ್ದೇವೆ. ಈಗ 153 ಲಕ್ಷ ರೂಪಾಯಿಯ ಒಂದು ಯೋಜನೆಯ ಪ್ರಸ್ತಾವನೆ ಅಲ್ಲಿಂದ ಬಂದಿದೆ. ನಮ್ಮ ಹತ್ತಿರ ಸುಮಾರು 138 ಲಕ್ಷ ರೂಪಾಯಿ ಅಲ್ಲಿ ಇದೆ. ಕಡಿಮೆಯಾಗುವಂಥ ದುಡ್ಡನ್ನು ಆ ಯೋಜನೆಯ ಮುಂದಿನ ಹಂತದಲ್ಲಿ ಅಂದರೆ ಕಾರ್ಯಕ್ರಮವನ್ನು ತೆಗೆದುಕೊಂಡ ನಂತರ ಮುಂದೆ ಅದರ ಅವಶ್ಯಕತೆ ಯಾವಾಗ ಬೀಳುತ್ತದೆ ಅದನ್ನು ನೋಡಿಕೊಂಡು ಅಲ್ಲಿಯ ಅಭಿವೃದ್ಧಿಯನ್ನು ನಾವು ಮಾಡುತ್ತೇವೆ.

ಶ್ರೀ ರಾಜು ಕೆ : ಮಾನ್ಯ ಅಧ್ಯಕ್ಷರೆ . . . .

ಅಧ್ಯಕ್ಷರು:ಆಯಿತು, ಅವರು 153 ಲಕ್ಷ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದ್ದಾರಲ್ಲಾ? ಕುಳಿತುಕೊಳ್ಳಿ.

ಶ್ರೀ ರಾಜು ಕೆ.: ದಯವಿಟ್ಟು ಮಾನ್ಯ ಸಚಿವರು ಎಷ್ಟು ದಿವಸಗಳಲ್ಲಿ ಮಾಡುತ್ತೀರಿ ಎನ್ನುವ ಉತ್ತರವನ್ನು ಕೊಡಬೇಕು.

ಶ್ರೀ ವಿ. ಎಸ್. ಆಚಾರ್ಯ : ಪ್ರಸ್ತಾವನೆ ಬಂದಿದೆ. ಆ ಪ್ರಸ್ತಾವನೆಯನ್ನು ಪರಿಶೀಲನೆ ಮಾಡಿ ಮಾನ್ಯ ಸದಸ್ಯರು ಹೇಳಿದ ಅಭಿಪ್ರಾಯದ ಹಿನ್ನೆಲೆಯಲ್ಲಿ ಅವರನ್ನೂ ಕರೆಸಿ ಅದನ್ನು ಯಾವ ರೀತಿಯಿಂದ ಮಾಡಬೇಕೆಂದು ತಿಳಿದುಕೊಂಡು ನಾನು ಯೋಚನೆ ಮಾಡುತ್ತೇನೆ.

ಅಧ್ಯಕ್ಷರು: ಆಯಿತು.

ಚಿಕ್ಕೋಡಿಯಲ್ಲಿ ನಡೆದಿರುವ ಡಕಾಯಿತಿ ಪ್ರಕರಣದ ಬಗ್ಗೆ

22 (90) ಶ್ರೀ ಪ್ರಕಾಶ್ ಬಾಬಣ್ಣ, ಹುಕ್ಕೇರಿ:(ಚಿಕ್ಕೋಡಿ ಸದಲಗಾ) ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕೋಡಿ ಪಟ್ಟಣದ ಪರಟಿ ಶ್ರೀ ನಾಗಲಿಂಗೇಶ್ವರ ಗುಡಿ ಹತ್ತಿರವಿರುವ ರವಿ ಮಾಳಿ ಎಂಬುವವರ ಟೈರ್ ಅಂಗಡಿ ಮೇಲೆ ಎರಡು ಬಾರಿ

ಡಕಾಯಿತರು ದಾಳಿ ಮಾಡಿದರೂ ಸಹ ಚಿಕ್ಕೋಡಿ ಪೊಲೀಸ್ ಠಾಣೆಯ ಪೋಲೀಸರು ಇಲ್ಲಿಯವರೆಗೆ ಡಕಾಯಿತರನ್ನು ಬಂಧಿಸದಿರಲು ಕಾರಣವೇನು?

ಆ) ಚಿಕ್ಕೋಡಿ ಹಾಗೂ ಸದಲಗಾ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಕಳೆದ ಮೂರು ವರ್ಷಗಳಲ್ಲಿ ದರೋಡೆ ಹಾಗೂ ಅಪಹರಣ ಪ್ರಕರಣಗಳು ನಡೆದ ಬಗ್ಗೆ ಎಷ್ಟು ಕೇಸುಗಳನ್ನು ದಾಖಲಿಸಲಾಗಿದೆ? ಇವುಗಳಲ್ಲಿ ಎಷ್ಟು ಕೇಸುಗಳನ್ನು ಪತ್ತೆ ಹಚ್ಚಿ ಎಷ್ಟು ಜನರನ್ನು ಬಂಧಿಸಲಾಗಿದೆ(.) ಈ ಪ್ರಕರಣಗಳು ಯಾವುವು? (ವಿವರವನ್ನು ನೀಡುವುದು)

ಡಾ॥ ವಿ .ಎಸ್. ಆಚಾರ್ಯ (ಗೃಹ ಸಚಿವರು):

ಅ) ಚಿಕ್ಕೋಡಿ ಪಟ್ಟಣದ ಪರಟಿ ನಾಗಲಿಂಗೇಶ್ವರ ಗುಡಿ ಹತ್ತಿರವಿರುವ ರವಿ ಮಾಳಿ ಎಂಬುವವರ ಟೈರ್ ಅಂಗಡಿಯಲ್ಲಿ ಈವರೆಗೆ ಒಂದು ಸಲ ಮಾತ್ರ ಕಳುವಾಗಿದ್ದು, ಅದು ದರೋಡೆ ಆಗಿರುವುದಿಲ್ಲ. ಕಳುವಾದ ಬಗ್ಗೆ ಚಿಕ್ಕೋಡಿ ಪೊಲೀಸ್ ಠಾಣೆ ಗುನ್ನಾ ನಂ 88/2010, ಕಲಂ : 457, 380 ಐಪಿಸಿ ನೇದ್ದು ದಿನಾಂಕ: 11/03/2010 ರಂದು ದಾಖಲಾಗಿದ್ದು, ಪ್ರಕರಣ ತನಿಖೆಯಲ್ಲಿರುತ್ತದೆ. ಈ ಮೊದಲು ಶ್ರೀ ಪರಟಿ ನಾಗಲಿಂಗೇಶ್ವರ ದೇವಸ್ಥಾನದ ಹತ್ತಿರ ಸನ್ 2005 ನೇ ಸಾಲಿನಲ್ಲಿ ಟಂಕಸಾಲೆಯವರ ಟೈರ್ ಅಂಗಡಿ ಕಳುವಾಗಿದ್ದು, ಚಿಕ್ಕೋಡಿ ಪೊಲೀಸ್ ಠಾಣೆ ಗುನ್ನಾ ನಂ 224/05, ಕಲಂ : 457, 380 ಐಪಿಸಿ ರೀತ್ಯಾ ಪ್ರಕರಣ ದಾಖಲಿಸಿದ್ದು, ಪ್ರಕರಣವು ಪತ್ತೆಯಾಗದೆ ಇದ್ದುದರಿಂದ ನ್ಯಾಯಾಲಯಕ್ಕೆ ಪತ್ತೆಯಾಗದೆ ಇರುವ ಪ್ರಕರಣವೆಂದು "ಸಿ" ಅಂತಿಮ ವರದಿಯನ್ನು ಸಲ್ಲಿಸಲಾಗಿರುತ್ತದೆ.

ಆ) ಚಿಕ್ಕೋಡಿ ಹಾಗೂ ಸದಲಗಾ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಯಾವುದೇ ದರೋಡೆ ಹಾಗೂ ಅಪಹರಣ ಪ್ರಕರಣಗಳು ನಡೆದಿರುವುದಿಲ್ಲ. ಅಪಹರಣಕ್ಕೆ ಸಂಬಂಧಿಸಿದಂತೆ 2007 ನೇ ಸಾಲಿನಲ್ಲಿ 1 ಪ್ರಕರಣ, 2008 ನೇ ಸಾಲಿನಲ್ಲಿ ಎರಡು ಪ್ರಕರಣಗಳು, 2009 ನೇ ಸಾಲಿನಲ್ಲಿ 5 ಪ್ರಕರಣಗಳು ಮತ್ತು 2010 ನೇ ಸಾಲಿನಲ್ಲಿ (ಜೂನ್ 15 ರವರೆಗೆ) 2 ಪ್ರಕರಣಗಳು ವರದಿಯಾಗಿರುತ್ತವೆ. ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಅನುಬಂಧ

ವರ್ಷ	ವರದಿ	ಸತ್ಯ	ಸುಳ್ಳು	ಅಪಹರಣ ವ್ಯಕ್ತಿ ಪತ್ತೆ	ನಾಪತ್ತೆ	ತನಿಖೆ	ಪಿಟಿ	ದಸ್ತಗೀರ ಮಾಡಿದ ಆರೋಪಿತರ ಸಂಖ್ಯೆ
2007	1	–	1	1	–	–	–	
2008	2	–	1	2	1	–	–	–
2009	5	3	2	6	–	1	2	7
2010(15/06/2010)	2	1	1	2	–	1	–	6
ಒಟ್ಟು	**10**	**04**	**05**	**11**	**01**	**02**	**02**	**13**

ಚಿಕ್ಕೋಡಿ ಮತ್ತು ಸದಲಗಾ ಪೊಲೀಸ್ ಠಾಣೆಗಳಲ್ಲಿ ದಾಖಲಾದ ಅಪಹರಣ ಪ್ರಕರಣಗಳ ಪೂರ್ಣ ವಿವರ.

ಅ. ನಂ.	ಪೊಲೀಸ್ ಠಾಣೆ ಹೆಸರು, ಗುನ್ನಾ ನಂ. ಮತ್ತು ಕಲಂ.	ವರದಿ ದಿನಾಂಕ ಮತ್ತು ಸ್ಥಳ.	ಪಿರ್ಯಾದಿದಾರರ ಹೆಸರು ಮತ್ತು ವಿಳಾಸ.	ಅಪಹರಣ ಕ್ಕೊಳಗಾದವರ ಹೆಸರು, ವಯಸ್ಸು ಜಾತಿ, ಫಿರ್ಯಾದಿದಾರರೊಂದಿಗೆ ಸಂಬಂಧ ಮತ್ತು ವಿಳಾಸ	ಆರೋಪಿತರ ಹೆಸರು ಮತ್ತು ವಿಳಾಸ.	ಆರೋಪಿತರನ್ನು ಬಂಧಿಸಿದ ದಿನಾಂಕ	ಪ್ರಕರಣದ ಹಂತ.
2007							
1	ಸದಲಗಾ ಠಾಣೆ ಗುನ್ನಾ ನಂ. 146/07 ಕಲಂ 143,144,147,323,3	22/10/07 ರಂದು ಭೋಜ	ಸೀತಾಬಾಯಿ ಅಣ್ಣಪ್ಪಾ ಪೂಜೇರಿ ಸಾ: ಭೋಜ	ಮಲಕಾರಿ ಕೆಂಚಪ್ಪಾ ಕೊಟರೆ ವಯಾ: 46 ವರ್ಷ, ಜಾತಿ: ಹಿಂದೂ	ನಿಂಗವ್ವಾ ಮಲಕಾರಿ ಕೊಟರೆ ಹಾಗೂ 8	---	"ಬಿ" ಸುಳ್ಳು 20/11/2007

	24,504,506,363(ಎ), 365 ಸಕ 149 ಐಪಿಸಿ (ಎಂ.ಎ.ಜಿ)	ಗ್ರಾಮ		ಕುರುಬರ ಸಾ: ಹುಬ್ಬರವಾಡಿ ತಾ: ರಾಯಬಾಗ ಸಂಬಂಧ: ಫಿರ್ಯಾದಿಯ ಅಳಿಯ	ಜನರು 8 ಜನರು ಸಾ: ಹುಬ್ಬರವಾಡಿ ತಾ: ರಾಯಬಾಗ		
2008							
1	ಚಿಕ್ಕೋಡಿ ಠಾಣೆ ಗು.ನಂ. 315/08, ಕಲಂ: 323, 352,363,447,448, 504,506	12/09/08 ರಂದು 1300 ಗಂಟೆಗೆ	ಮಲ್ಲಪ್ಪ ಬಸಪ್ಪ ಹರಗಣ್ಣನವರ, ಸಾ: ಮುಗಳಿ	ಮಲ್ಲಪ್ಪ ಬಸಪ್ಪ ಭೀಮಪ್ಪ ಹರಗಣ್ಣನವರ, ಜಾತಿ ಹಿಂದೂ, ವಯಸ್ಸು 45 ವರ್ಷ ಸಾ:	ಸ್ವರೂಪ ಭೀಮಪ್ಪ ಹರಗಣ್ಣನವರ, ಹಾಗೂ 12 ಜನರು ಸಾ:	--	"ಬಿ" ಸುಳ್ಳು ಅಂತಾ ಸಮರಿ ಮಂಜೂರಾಗಿದ್ದು ಅದೆ.

	ಸ:ಕ 34 ಐಪಿಸಿ (ಎಂ.ಎ..ಜಿ)	ಮುಗಳಿ ಗ್ರಾಮ		ಮುಗಳಿ, ಸಂಬಂಧ: ಸ್ವತ:	ಎಲ್ಲರೂ ಮುಗಳಿ		08/09/09
2	ಸದಲಗಾ ಠಾಣೆ ಗುನ್ನಾ ನಂ. 38/08 ಕಲಂ. 366,342 ಸಕ 32 ಐಪಿಸಿ	09/03/08 ಯಕ್ಷಂಬಾ ಗ್ರಾಮ	ಶ್ರೀಮತಿ ರಾಣಿ ಸುರೇಶ ಜಾಧವ ಸಾ: ಕೋಚಿ ಪೇಠ ವಡಗಾಂವ ಹಾಲಿ ಯಕ್ಷಂಬಾ	ಶ್ರೀಮತಿ ರಾಣಿ ಸುರೇಶ ಜಾಧವ ವಯಾ: 18 ವರ್ಷ, ಸಾ: ಕೋಚಿ ಪೇಠ ವಡಗಾಂವ ಹಾಲಿ ಯಕ್ಷಂಬಾ ಸಂಬಂಧ: ಸ್ವಂತ:	ಯಾರೋ 4 ಜನ ಆರೋಪಿತರು	– –	"ಸಿ" ನಾಪತ್ತೆ 02/07/08
2009							

1.	ಚಿಕ್ಕೋಡಿ ಠಾಣೆ ಗುನ್ನಾ.ನಂ. 96/09,ಕಲಂ: 366 ಐಪಿಸಿ	12/03/09 ರಂದು 2300 ಗಂಟೆಗೆ ಅಂಕಲಿ ಗ್ರಾಮ	ರೇಖಾ ತಂದೆ ಬಾಳಸಾಬ ಮಗದುಮ್ಮ ಸಾ: ಬಾವಾನಸವದತ್ತಿ	ರೇಖಾ ತಂದೆ ಬಾಳಸಾಬ ಮಗದುಮ್ಮ ವಯಸ್ಸು 21 ವರ್ಷ, ಜಾತಿ ಹಿಂದೂ ಲಿಂಗಾಯತ ಸಾ: ಬಾವಾನಸವದತ್ತಿ, ಸಂಬಂಧ: ಸ್ವತ:	1)ಸುಕುಮಾರತವನಪ್ಪ ಕಾಮಗೌಡ 2) ಅಜೀತ ರತ್ನಪ್ಪ ನಾಯಿಕ ಸಾ: ಇಬ್ಬರೂ ಬಾವಾನ ಸವದತ್ತಿ	13/03/09	ಸಿ.ಸಿ.ನಂ. 278/09 ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿ ಇರುತ್ತದೆ.
2.	ಚಿಕ್ಕೋಡಿ ಗುನ್ನಾ.ನಂ. 124/09,ಕಲಂ: 365	24/03/09 ರಂದು	ಶ್ರೀಮತಿ ಶಕುಂತಲಾ ಅಣ್ಣಾಸಾಹೇ	ಚೈತಾಲಿ ತಂದೆ ಅಣ್ಣಾಸಾಹೇಬ ಜಾಧವ ಜಾತಿ	1)ಉದಯ ಹವಲ್ದಾರ 2)ಸಾ:	26/04/09	ತನಿಖೆ

	ಐಪಿಸಿ	2015 ಗಂಟೆಗೆ ಕಾಡಾಪೂರ ಗ್ರಾಮ	ಬ ಜಾಧವ ಸಾ: ಕಾಡಾಪೂರ	ಹಿಂದೂ ಮರಾಠಾ, ವಯಸ್ಸು 22 ವರ್ಷ, ಸಾ: ಕಾಡಾಪೂರ, ಫಿರ್ಯಾದಿಯ ಮಗಳು	ಕೆರೂರ		
3	ಚಿಕ್ಕೋಡಿ ಗುನ್ನಾ.ನಂ. 205/09,ಕಲಂ: 363, 504 ಐಪಿಸಿ	20/05/09 ರಂದು 1300 ಗಂಟೆ ಚಿಕ್ಕೋಡಿ	ಶ್ರೀಮತಿ ವಾಮಾ ಆನಂದ ಜೋಶಿ. ಸಾ: ಚಂದೂರ	ಕುಮಾರಿ ಸುನೀತಾ ತಂದೆ ಆನಂದ ಜೋಶಿ ವಯಸ್ಸು 21 ವರ್ಷ, ಜಾತಿ ಬ್ರಾಹ್ಮಣ, ಸಾ: ಚಂದೂರ, ಫಿರ್ಯಾದಿಯ	1)ಸಂದೀಪ ಶಂಕರಗೌಡ ಪಾಟೀಲ ಸಾ: ಚಂದೂರ	– –	"ಬಿ" ತಪ್ಪು ತಿಳಿವಳಿಕೆ ಅಂತಾ 08/09/09 ಸಮರಿ ಮಂಜೂರ ಆಗಿದ್ದು

		ಬಸ್ಸ್ ನಿಲ್ದಾಣ		ಮಗಳು			ಅದೆ.
4.	ಚಿಕ್ಕೋಡಿ ಗುನ್ನಾ.ನಂ. 415/09, ಕಲಂ: 363, ಐಪಿಸಿ	11/11/09 ರಂದು 1900 ಗಂಟೆಗೆ ಅಂಕಲಿ ಗ್ರಾಮ	ಶಿವಬಾಳು ಲಕ್ಷ್ಮಣ ರಾಯಮಾನೆ ಸಾ: ಅಂಕಲಿ	ಶ್ರೀಮತಿ ದೀಪಾಲಿ ತಂದೆ ಶಿವಬಾಳು ರಾಯಮನೆ 19 ವರ್ಷ, ಜಾತಿ ಹಿಂದೂ ದಲಿತ, ಸಾ : ಅಂಕಲಿ ಫಿರ್ಯಾದಿಯ ಮಗಳು	1) ದಿಲೀಪ ದಗಡು ಮೇತ್ರಿ ಸಾ: ಅಂಕಲಿ	– –	"ಬಿ" ತಪ್ಪು ತಿಳಿವಳಿಕೆ ಅಂತಾ ಸಮರಿ ಮಂಜೂರ ಆಗಿದ್ದು ಅದೆ.
5	ಸದಲಗಾ ಠಾಣೆ ಗುನ್ನಾ ನಂ.	04/07/09	ವಿವೇಕಾನಂದ	1)ಶಿವಾನಿ ವಿವೇಕಾನಂದ ಕೇಸ್ತಿ,	1)ರುಕ್ಮೀಣಿ ಕೋಂ.	ಎ1–ಎ4 4/7/09	ಸಿಸಿನಂ 181/2010

	106/09 ಕಲಂ : 363, 365,368,109 ಸಕ 34 ಐಪಿಸಿ	ಉಳ್ಳಾಗಡ್ಡಿ ವಾಡಿ ಗ್ರಾಮ	ಬಾಬುರಾವ ಕೇಸ್ತಿ ಸಾ: ಉಳ್ಳಾಗಡ್ಡಿವಾಡಿ	ವಯಾ – 9 ವರ್ಷ, ಹಿಂದೂ ಲಿಂಗಾಯಿತ ಸಾ: ಉಳ್ಳಗಡ್ಡಿವಾಡಿ 2)ಪ್ರಶಾಂತ ವಿವೇಕಾನಂದ ಕೇಸ್ತಿ, ವಯಾ–6ವರ್ಷ, ಹಿಂದೂ ಲಿಂಗಾಯತ ಸಾ: ಉಳ್ಳಗಡ್ಡಿವಾಡಿ ಸಂಬಂಧ : ಫಿರ್ಯಾದಿಯ ಮಕ್ಕಳು	ಕುಮಾರ ಕಾನಡೆ 2)ವಿಶ್ವನಾಥ ಬಾಬುರಾವ ಕೇಸ್ತಿ 3) ಬಾಬುರಾವ ಹೊಣ್ಣಪ್ಪಾ ಕೇಸ್ತಿ 4)ಶಾಂತಾ ಕೋಂ. ಬಾಬುರಾವ		ನ್ಯಾಯಾಲಂ ಮದಲ್ಲಿ ವಿಚಾರಣೆಯ ಲ್ಲಿ ಇರುತ್ತವೆ.

					ಕೇಸ್ತಿ ಸಾ: ಎಲ್ಲರೂ ಊಳ್ಳಗಡ್ಡಿವಾಡಿ		
2010							
1	ಚಿಕ್ಕೋಡಿ, ಗುನ್ನಾನಂ 10/10 ಕಲಂ:366 ಐಪಿಸಿ	09/1/10 ರಂದು ಚಿಕ್ಕೋಡಿ	ಶ್ರೀಮತಿ ರುಕ್ಮವ್ವಾ ಎಂ. ಹಂದಿಗುಡೆ ಸಾ: ಮೂಡಲಗಿ ವರ್ಷ,	ಮಾಹಾದೇವ ಮಲ್ಲಪ್ಪ ಹಂದಿಗುಡೆ ಜಾತಿ: ಹಿಂದೂ ವಯಸ್ಸು: 22	ದಿಲೀಪ ಗಣಪತಿ ಶ್ಯಾಂಡಗಿ ಸಾ: ಮೊರಬ	– –	"ಬಿ" ತಪ್ಪು ತಿಳುವಳಿಕೆ ಅಂತಾ ಸಮರಿ ಮಂಜೂರ ಆಗಿದ್ದು ಅದೆ.

			ಸಾ:ಮಾಡಲಗಿ, ಫಿರ್ಯಾದಿಂತು ಮಗ				31/05/10
2	ಸದಲಗಾ ಠಾಣೆ ಗುನ್ನಾ ನಂ. 64/10 ಕಲಂ.143,147,366 (ಎ),342,109 ಸಕ 149 ಐಪಿಸಿ	28/3/10 ನೇಜ ಗ್ರಾಮ	ಶ್ರೀ ಸುರೇಶ ರಾಮು ಹೆರಗೆ ಸಾ!! ನೇಜ	ಸಿದ್ಧಾರ್ಥಿನಿ @ ಶಿಲ್ಪಾ ತಂದೆ ಸುರೇಶ ಹೆರಗೆ ಜಾತಿ: ಜೈನ ವಯಾ:17 ವರ್ಷ, ಉದ್ಯೋಗ : ವಿದ್ಯಾರ್ಥಿನಿ. ಸಾ: ನೇಜ ಸಂಬಂಧ :	1)ಜ್ಯೋತಿರಾವು ಬಾಬು ಮಾಳಿ ಸಾ: ನೇಜ 2)ತುಕಾರಾಮ ಬಾಬು ಮಾಳಿ ಸಾ: ನೇಜ	ಎ2–ಎ6 31/3/10 ಎ1 01/04/10	ತನಿಖೆ

				ಫಿರ್ಯಾದಿಯ ಮಗಳು	3)ಶಿವಾ @ ಶಿವಾನಂದ ಅಶೋಕ ಡೊಡಮನಿ ಸಾ: ಉಮರಾಣಿ 4) ಬಾಬು ಸಕಾರಾಮ ಮಾಳಿ ಸಾ: ನೇಜ 5)ಶಾಂತಾಬಾಯಿ ಗಂಡ		

					ಬಾಬು ಮಾಳಿ ಸಾ: ನೇಜ 6) ಕಾಂತಾಬಾಯಿ @ ಕಾಂತಾ ಮಹಾದೇವ ಅರಭಾವಿ. ಸಾ: ಹಾಲಟ್ಟಿ ಲಕ್ಷ್ಮೀ ನಗರ		

ಮಾನ್ಯ ಅಧ್ಯಕ್ಷರೆ, ಉತ್ತರವನ್ನು ನಾನು ನೋಡಿದ್ದೇನೆ. ಚಿಕ್ಕೋಡಿಯಲ್ಲಿ ಎರಡು ಟೈರ್ ಅಂಗಡಿಗಳು ದರೋಡೆಯಾಗಿದೆ. ಎರಡು ಅಂಗಡಿಯಲ್ಲಿ ಸುಮಾರು ಎಂಟೆಂಟು ಲಕ್ಷ ರೂಪಾಯಿಯಷ್ಟು ಟೈರ್ ಕಳುವಾದ ಬಗ್ಗೆ ಅವರು ಯಾವ್ಯಾವ ಟೈರುಗಳು, ಯಾವ್ಯಾವ size ನದ್ದು ಎನ್ನುವ number ಕೂಡ ಕೊಟ್ಟಿದ್ದಾರೆ. ತಾವು ಉತ್ತರದಲ್ಲಿ ಏನು ಹೇಳುತ್ತೀರೆಂದರೆ, 2005ರಲ್ಲಿ ಏನು ಕಳ್ಳತನವಾಗಿದೆ ಅದನ್ನು ನಾವು ಕಂಡುಹಿಡಿಯುವುದಕ್ಕೆ ಆಗಿಲ್ಲ. ಆದ್ದರಿಂದ ಆ ಕೇಸ್‌ಅನ್ನು ಮುಕ್ತಾಯ ಮಾಡುತ್ತಿದ್ದೇವೆ ಎನ್ನುವ ಮಾತನ್ನು ಹೇಳುತ್ತಿದ್ದೀರಿ. ಇದು ಸರಿಯಾಗಿ ತನಿಖೆಯೇ ಆಗಿಲ್ಲವೆಂದು ನನ್ನ ವಿಚಾರ. ನೀವು ಈ ತರಹ ಎಂಟೆಂಟು ಲಕ್ಷ, ಹತ್ತತ್ತು ಲಕ್ಷ ರೂಪಾಯಿ ದರೋಡೆಯಾದಂಥ ಪ್ರಕರಣಗಳನ್ನು ಇಲಾಖೆಯವರು ಮುಕ್ತಾಯ ಮಾಡುತ್ತೇವೆಂದು ಹೇಳಿದರೆ, ಇದು ಎಷ್ಟರಮಟ್ಟಿಗೆ ಸಮಂಜಸ ಅನಿಸುತ್ತದೆ ಎಂದು ನನಗೆ ಗೊತ್ತಿಲ್ಲ.

ಇನ್ನೊಂದು ವಿಷಯವೇನೆಂದರೆ, 2007 ರಿಂದ 2010ರೊಳಗೆ ಎಷ್ಟೋ ಹೆಣ್ಣುಮಕ್ಕಳನ್ನು ಇಲ್ಲಿಂದ ಬೇರೆ ಕಡೆ ಸ್ಥಳಾಂತರ ಮಾಡಿರುವ ಬಗ್ಗೆ ನಾನು ಪ್ರಶ್ನೆಯನ್ನೂ ಕೇಳಿದ್ದೇನೆ. ಇದರಲ್ಲಿಯೂ ಕೂಡ ನಾವು ಸುಳ್ಳು ವರದಿಯನ್ನು ಕೊಟ್ಟಿದ್ದಾರೆ ಎಂದು ಅದನ್ನು ಬಿ-ಫಾರ್ಮ್ ಮಾಡಲಿಕ್ಕೆ ಹೊರಟಿದ್ದೀರಿ. ಯಾವ್ಯಾವ ಹೆಣ್ಣು ಮಕ್ಕಳು ಇವತ್ತು ಬೇರೆ ಕಡೆ ಉಳಿದಿದ್ದಾರೆ, ಅವರ ಮೇಲೆ ನಾವು ಪೊಲೀಸ್ ಸ್ಟೇಷನ್‌ನಲ್ಲಿ ಕೇಸ್ ಕೊಡುವುದಕ್ಕೂ ಆಗುವುದಿಲ್ಲ. ಪೊಲೀಸ್‌ನವರು ಏನು ಹೇಳುತ್ತಾರೆಂದರೆ, ನಮಗೆ ನಿರ್ದಿಷ್ಟವಾದ ಮಾಹಿತಿ ಕೊಡಿ ಎಂದು ಹೇಳುತ್ತಾರೆ. ಲಿಖಿತವಾದ ಮಾಹಿತಿ ಕೊಡಿ. ನಿರ್ದಿಷ್ಟವಾದ ಮಾಹಿತಿ ಕೊಟ್ಟರೆ ಮಾತ್ರ ನಾವು ಅವರನ್ನು ಹುಡುಕಲಿಕ್ಕೆ ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಸಾಧ್ಯವಾಗುವುದಿಲ್ಲ ಎನ್ನುವ ಮಾತನ್ನು ಹೇಳುತ್ತಾರೆ. ಹಾಗಾದರೆ ಪೊಲೀಸ್ ಇಲಾಖೆಯವರ ಕೆಲಸವೇನಿದೆ?

ಅಧ್ಯಕ್ಷರು : ಆಯಿತು, ಮಾನ್ಯ ಸಚಿವರು ಉತ್ತರ ಹೇಳಲಿ.

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ : ಮಾನ್ಯ ಅಧ್ಯಕ್ಷರೆ, ಇದು ಗಂಭೀರವಾದ ವಿಷಯ.

ಅಧ್ಯಕ್ಷರು : ಆಯಿತು, ನೀವು ಕೇಳಿದ್ದೀರಲ್ಲಾ? ಅವರು ಉತ್ತರ ಹೇಳಲಿ.

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ : ಇವತ್ತು 12 ಜನ ಹೆಣ್ಣು ಮಕ್ಕಳನ್ನು ನಮ್ಮ ಕ್ಷೇತ್ರದಿಂದ . . .

ಅಧ್ಯಕ್ಷರು : ಅವರು ಉತ್ತರ ಹೇಳಲಿ, ಆಮೇಲೆ ಮತ್ತೆ ಕೇಳಿ.

ಡಾ॥ ವಿ ಎಸ್ ಆಚಾರ್ಯ : ಚಿಕ್ಕೋಡಿ ಮತ್ತು ಸದಲಗಾ ಈ ಎರಡೂ ಕಡೆ 2005 ರಲ್ಲಿ ಒಂದು ಟೈರ್ ಅಂಗಡಿಯಲ್ಲಿ ಕಳ್ಳತನವಾಯಿತು. 2010 ರಲ್ಲಿ ಒಂದು ಕಡೆ ಕಳ್ಳತನವಾಯಿತು. ಅವೆರಡೂ ಪ್ರತ್ಯೇಕವಾಗಿ ಆಗಿರುವಂಥದ್ದು, ಎರಡೂ ಒಂದೇ ಅಂಗಡಿಯಲ್ಲಿ ಆದದ್ದಲ್ಲ. ಅದು ಅವರಿಗೂ ಗೊತ್ತಿದೆ. 2010 ರಲ್ಲಿ ಆಗಿರುವುದು ಮಾಳಿಯವರ ಅಂಗಡಿಯಲ್ಲಿ, ಅದಕ್ಕೆ ಮುಂಚೆ ಟಂಕಸಾಲೆಯವರ ಅಂಗಡಿಯಲ್ಲಿ ಆಗಿತ್ತು. 2005 ರಲ್ಲಿ ಆಗಿರುವುದರ ಬಗ್ಗೆ ತನಿಖೆಯಾಗಿ ಅದರ ವಿವರ ಗೊತ್ತಾಗಲಿಲ್ಲ. ಸಿ ರಿಪೋರ್ಟ್‌ನ್ನು ಹಾಕಿದ್ದೇವೆ. 2010ರಲ್ಲಿ ಆಗಿರುವುದರ ಬಗ್ಗೆ ತನಿಖೆ ಪ್ರಗತಿಯ ಹಂತದಲ್ಲಿದೆ. ಆ ಭಾಗದಲ್ಲಿ ಕಳೆದ 3 ವರ್ಷದಲ್ಲಿ ದರೋಡೆ ಪ್ರಕರಣಗಳಾಗಿದೆಯೆಂದು ಎರಡನೇ ಪ್ರಶ್ನೆಯನ್ನು ಅವರು ಕೇಳಿದ್ದಾರೆ. ಆ ರೀತಿ ದರೋಡೆ ಪ್ರಕರಣ ಆಗಿಲ್ಲ.

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ : ಮಾನ್ಯ ಅಧ್ಯಕ್ಷರೆ, ಚಿಕ್ಕೋಡಿಯಲ್ಲಿ ಟೈರ್ ಅಂಗಡಿಯಲ್ಲಿ ಏನು ದಾಳಿ ಮಾಡಿದ್ದಾರೆ ಅದು ಕಳ್ಳತನವಲ್ಲ. ಇದು ದರೋಡೆ ಪ್ರಕರಣ ಎಂದು FIR ನಲ್ಲಿ ದಾಖಲೆ ಮಾಡಿದ್ದಾರೆ.

ಡಾ|| ವಿ ಎಸ್ ಆಚಾರ್ಯ : 2010ನೇ ಸಾಲಿನಲ್ಲಿ ಆಗಿರುವುದರ ಬಗ್ಗೆ ಬೇಕಾದರೆ ವಿಶೇಷವಾಗಿ ಒಂದು ಟೀಮ್ ಮಾಡುತ್ತೇವೆ. ನಾಪತ್ತೆಯಾಗಿರುವವರ ಪ್ರಕರಣಕ್ಕೆ ಸಂಬಂಧಿಸಿದಂತೆ ನಾನು ಪೂರ್ಣವಾದ ವಿವರಣೆ ಕೊಟ್ಟಿದ್ದೇನೆ. ಫಿರ್ಯಾದುದಾರರು, ನಾಪತ್ತೆಯಾದವರು, ಅದು ಯಾವ ಹಂತದಲ್ಲಿದೆ, ಕೋರ್ಟ್‌ನಲ್ಲಿ ಎಷ್ಟು ಇದೆ, ಈ ಪ್ರಕರಣದಲ್ಲಿ ಸುಳ್ಳು ಎಂದು ಅವರು ಮನೆಗೆ ವಾಪಸ್ ಬಂದಿರುವಂಥದ್ದು ಯಾವುದು ಇವೆಲ್ಲದರ ವಿವರವನ್ನು ಕೊಟ್ಟಿದ್ದೇನೆ. ಅದರ ಬಗ್ಗೆ ಅವರು ಇನ್ನೊಂದು ಸಲ ಪರಾಮರ್ಶೆ ಮಾಡಬಹುದು. ಒಟ್ಟು 2007-08, 2008-09 ಮತ್ತು 2010 ರಲ್ಲಿ ಕಳೆದ ಜೂನ್ 15 ರವರೆಗೆ ಆ ಎರಡೂ ಪೊಲೀಸ್ ಸ್ಟೇಷನ್ ವ್ಯಾಪ್ತಿಯಲ್ಲಿ ಒಟ್ಟು 10 ಜನ ನಾಪತ್ತೆಯಾಗಿದ್ದು ನಿಜ. ಅದರ ಪೈಕಿ ಒಬ್ಬರದ್ದು ಪತ್ತೆ ಆಗಿಲ್ಲ. ಉಳಿದವರು ಒಂದು ಹದಿಹರೆಯದ

ವಯಸ್ಸಿಗೆ ಬಂದಂಥ ಹುಡುಗಿಯರ ಅಪಹರಣ ಆಗಿರತಕ್ಕದ್ದು. ಇನ್ನು ಬೇರೆ ಪ್ರಕರಣಗಳು ವಾಪಸ್ ಆಗಿರುವಂಥದ್ದು. ಕೆಲವು ಕೋರ್ಟ್‌ನಲ್ಲಿದೆ. ಅದರ ವಿವರವನ್ನು ಕೊಟ್ಟಿದ್ದೇನೆ. ದಯವಿಟ್ಟು ತಾವು ಪರಾಮರ್ಶಿಸಿ.

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ : ನಾನು ಶಿವಾನಿ ಮತ್ತು ಪ್ರಶಾಂತ ಎಂಬ ಇಬ್ಬರ ಮಕ್ಕಳ ಬಗ್ಗೆ ಹೇಳುವುದಕ್ಕೆ ಇಷ್ಟಪಡುತ್ತಿದ್ದೇನೆ. ಅವರಿಬ್ಬರನ್ನು ಕಳವು ಮಾಡಿಕೊಂಡು ಹೋದಮೇಲೆ ಪೊಲೀಸ್ ಸ್ಟೇಷನ್‌ಗೆ ದೂರು ಕೊಡಲು ಹೋದರೆ ಅಲ್ಲಿನ ಅಧಿಕಾರಿಗಳು ಅವರು ಎಲ್ಲಿಂದ ಹೋದರು, ಯಾವ ಜಾಗಕ್ಕೆ ಹೋಗಿ ಮುಟ್ಟಿದ್ದಾರೆ ಅದರ ಬಗ್ಗೆ ಸಂಪೂರ್ಣವಾದ ಮಾಹಿತಿಯನ್ನು ನಮಗೆ ತಂದು ಕೊಡಿ ಆಮೇಲೆ ನಾವು ಕೇಸ್ ಬುಕ್ ಮಾಡುತ್ತೇವೆಂದು ಹೇಳಿದ್ದಾರೆ. ನಮ್ಮ ಭಾಗ ಮಹಾರಾಷ್ಟ್ರದ ಗಡಿ ಭಾಗದಲ್ಲಿರುವುದರಿಂದ ಈ ರೀತಿ ಪ್ರತಿ ವರ್ಷ 10-12 ಜನರು ಕಳವು ಆಗುವುದು ನಮ್ಮಲ್ಲಿ ಒಂದು ದಂಧೆಯಾಗಿದೆ. ಇದು ಸುಳ್ಳು ಎಂದು ಹೇಗೆ ಮಾಡುತ್ತಾರೆಂದರೆ, ಆಮೇಲೆ ಪೊಲೀಸರೇ ಅವರನ್ನು ಕರೆದು ನಮ್ಮ ವರದಿ ಸುಳ್ಳು ಎಂದು ಬರೆಸಿಕೊಳ್ಳುತ್ತಾರೆ. ಆದ್ದರಿಂದ ಮಾನ್ಯ ಗೃಹ ಸಚಿವರು ಇದರ ಬಗ್ಗೆ ಗಂಭೀರವಾಗಿ ವಿಚಾರ ಮಾಡಬೇಕು. ಅಲ್ಲಿ ಪೊಲೀಸ್ ಇಲಾಖೆಯವರು ಏನು ಕೆಲಸ ಮಾಡುತ್ತಿದ್ದಾರೆ. ಎಂಬುದನ್ನು ತಮ್ಮ ಗಮನಕ್ಕೆ ತರಲು ಇಷ್ಟಪಡುತ್ತಿದ್ದೇನೆ. ಅಲ್ಲಿ ಇವತ್ತು ಪೊಲೀಸ್ ಇಲಾಖೆಯೇ ಇಲ್ಲ. ಇವತ್ತು ಶಾಲೆಯ ಶಿಕ್ಷಕರ ಮೇಲೆ ಬಲಾತ್ಕಾರ ಮಾಡುವ ಕೆಲಸ ಮಾಡುತ್ತಿದ್ದಾರೆ. ಪೊಲೀಸ್ ನವರು ಅಪರಾಧಿಗಳನ್ನು ಹುಡುಕುವುದನ್ನು ಬಿಟ್ಟು ಈ ರೀತಿಯ ಕೆಲಸ ಮಾಡುತ್ತಿದ್ದಾರೆ. ಅಥಣಿಯಲ್ಲಿ ಇದೇ ರೀತಿ ಒಂದು ಘಟನೆಯಾಗಿದೆ, ಒಬ್ಬ ಪಿ.ಸಿ. ಹೋಗಿ ಶಿಕ್ಷಕಿಯ ಮೇಲೆ ಬಲಾತ್ಕಾರ ಮಾಡಿದ್ದಾನೆ. ಅದು ಇವತ್ತು ಪೇಪರ್‌ನಲ್ಲೂ ಬಂದಿದೆ. ಮಾನ್ಯ ಸುರೇಶ್ ಅಂಗಡಿಯವರೂ ನಮ್ಮ ಬೆಳಗಾಂ ಜಿಲ್ಲೆಯಲ್ಲಿ ಪೊಲೀಸ್ ಇಲಾಖೆ ಸರಿಯಾಗಿ ಕರ್ತವ್ಯ ನಿರ್ವಹಿಸುತ್ತಿಲ್ಲ, ದಕ್ಷ ಆಡಳಿತವನ್ನು ಕೊಡುತ್ತಿಲ್ಲವೆಂದು ಒಂದು ಸಭೆಯಲ್ಲಿ ಹೇಳಿದ್ದಾರೆ.

ಅಧ್ಯಕ್ಷರು : ತಾವು ಪ್ರಶ್ನೆಗೆ ಸೀಮಿತವಾಗಿ ಕೇಳಿ. ಈ ರೀತಿ ಸಡನ್ ಆಗಿ ಬೇರೆ ವಿಚಾರವನ್ನು ಕೇಳಿದರೆ ಅವರು ಯಾವ ರೀತಿಯಾಗಿ ಮಾಹಿತಿ ಕೊಡುವುದು?

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ : ನಾನು ಎಲ್ಲಾ ದಾಖಲೆಗಳನ್ನು ತಂದಿದ್ದೇನೆ.

ಅಧ್ಯಕ್ಷರು : ತಾವು ದಾಖಲೆಗಳನ್ನು ಈಗ ಕೊಟ್ಟರೆ ಅವರ ಹತ್ತಿರ ಮಾಹಿತಿ ಹೇಗೆ ಇರುತ್ತದೆ?

ಡಾ॥ ವಿ. ಎಸ್. ಆಚಾರ್ಯ : ಮಾನ್ಯ ಸದಸ್ಯರು ಹೇಳಿದಂಥ ವಿಷಯ ಮನನವಾಗಿದೆ. 2007ನೇ ಇಸವಿಯಿಂದ ಇಲ್ಲಿಯವರೆಗೆ 10 ಜನ ನಾಪತ್ತೆಯಾಗಿದ್ದಾರೆ. ಆದರೆ, ಇದೇ ಅವಧಿಯಲ್ಲಿ ಹಿಂದಿನ ಬಾಕಿ ಇದ್ದದ್ದು ಸುಮಾರು 11 ಜನರನ್ನು ನಾವು ಪತ್ತೆ ಮಾಡಿ ಅವರ ಹೆಸರನ್ನು ತಿಳಿಸಿದ್ದೇವೆ. ಅಂದರೆ, 2007ಕ್ಕೂ ಹಿಂದೆ ನಾಪತ್ತೆಯಾಗಿದ್ದ ಇಬ್ಬರನ್ನೂ ಸೇರಿಸಿ ಪತ್ತೆ ಮಾಡಿ ಒಟ್ಟು 11 ಜನರನ್ನು ಪತ್ತೆ ಮಾಡಿದ್ದಾರೆ. ಪೊಲೀಸರು ಏನೂ ಮಾಡಲಿಲ್ಲವೆಂದು ಹೇಳುವುದು ಸರಿಯಲ್ಲ. ಈ ಅವಧಿಯಲ್ಲಿ ನಾಪತ್ತೆಯಾಗಿರುವ ಒಬ್ಬರು ಪತ್ತೆಯಾಗಿಲ್ಲ. ಆದರೆ, ಇದೇ ಅವಧಿಯಲ್ಲಿ 4 ಕೇಸುಗಳಲ್ಲಿ ಸರಿಯಾದ ದೂರು ಬಂದಿದೆ, ಅದಕ್ಕೆ ಬೇಕಾದಂಥ ಎಲ್ಲಾ ಕ್ರಮ ತೆಗೆದುಕೊಂಡಿದ್ದೇವೆ. 5 ಪ್ರಕರಣಗಳು ಸುಳ್ಳು ಎನ್ನುವುದು ಮೇಲುನೋಟಕ್ಕೆ ಕಾಣುತ್ತದೆ. ಅವರುಗಳು ಮನೆಗೆ ಬಂದಿದ್ದಾರೆ. ಅವರು ಮನೆಯಲ್ಲಿ ಮನಸ್ತಾಪ, ಜಗಳ ಅಥವಾ ಬೇರೆ ಯಾವುದೋ ಕಾರಣದಿಂದ ಹೋಗಿರಬಹುದು. ಅಂದರೆ, ನಾಪತ್ತೆಯಾಗಿರುವಂಥದ್ದು ಒಬ್ಬರೇ ಆಗಿದ್ದರೂ ನಾವು ಬಹಳ ಕಳವಳವನ್ನು ವ್ಯಕ್ತ ಮಾಡಬೇಕಾಗುತ್ತದೆ. ಪಕ್ಕದ ಮಹಾರಾಷ್ಟ್ರ ಮತ್ತು ಎಲ್ಲಾ ಕಡೆಗೆ ನಮ್ಮ ಪೊಲೀಸರು ಹೋಗಿದ್ದಾರೆ. ಇವತ್ತಿನ ಪೇಪರ್‌ನಲ್ಲಿ ಬಂದಿರುವ ವಿಷಯವನ್ನೇನು ಅವರು ಹೇಳಿದ್ದಾರೆ ಅದರ ಬಗ್ಗೆ ಗಮನ ಹರಿಸಿ ಅಲ್ಲಿ ಪೊಲೀಸ್ ವ್ಯವಸ್ಥೆಯನ್ನು ಇನ್ನಷ್ಟು ಚುರುಕುಗೊಳಿಸುವ ಕೆಲಸ ಮತ್ತು ಬೀಟ್‌ವ್ಯವಸ್ಥೆ ಮಾಡುತ್ತೇವೆ ಜನರಿಗೂ ಜಗೃತಿ ವಹಿಸುವ ಕೆಲಸವನ್ನು ಮಾಡುತ್ತೇವೆ.

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ : ಮಾನ್ಯ ಅಧ್ಯಕ್ಷರೆ. ನಾನು ಬಹಳ ಗಂಬೀರವಾದ ವಿಚಾರವನ್ನು ಕೇಳುತ್ತಿದ್ದೇನೆ.

ಅಧ್ಯಕ್ಷರು: ತಾವು ಬೇರೆ ರೂಪದಲ್ಲಿ ತನ್ನಿ. ಚರ್ಚೆಗೆ ಅವಕಾಶ ಕೊಡುತ್ತೇನೆ.

ಅಧ್ಯಕ್ಷರು: ಮಾನ್ಯ ಮಂಜು ರವರೆ ತಮ್ಮ ಪ್ರಶ್ನೆಗೆ ಕಾಲಾವಕಾಶವನ್ನು ಕೊಟ್ಟಿದ್ದಾರೆ. ಮುಂದಿನ ವಾರ ಕೊಡಿಸೋಣ.

ಶ್ರೀ ಎ. ಮಂಜು : ಮುಂದಿನವಾರ definite ಆಗಿ ಕೊಡಿಸುತ್ತೀರಾ?

ಅಧ್ಯಕ್ಷರು: ಕೊಡಿಸೋಣ.

ಶ್ರೀ ಎ. ಮಂಜು : ಕೊಡಿಸೋಣ ಎನ್ನುವುದಲ್ಲ. ಇದು ಬಹಳ ಗುರುತರವಾದ ಪ್ರಶ್ನೆ. ನೀವು last time ಹೀಗೆಯೇ ಮಾಡಿದ್ದೀರಿ.

ಅಧ್ಯಕ್ಷರು: ಉತ್ತರ ಕೊಡಲು ಸೂಚನೆಯನ್ನು ಕೊಟ್ಟಿದ್ದೇನೆ.

ಶ್ರೀ ಎ. ಮಂಜು : ಈ ಸಂದರ್ಭದಲ್ಲಿ ಅವಕಾಶ ಕೊಡದಿದ್ದರೆ ಮುಂದೆ ಕೊಟ್ಟರೆ ಅರ್ಥ ಇರುತ್ತದೆಯೇ?

ಅಧ್ಯಕ್ಷರು:ಮುಂದಿನ ವಾರ ಕೊಡಿಸುತ್ತೇನೆ. ದಯಮಾಡಿ ಕುಳಿತುಕೊಳ್ಳಿ.

ಶ್ರೀ ಎ. ಮಂಜು : ಮಾನ್ಯ ಮುಖ್ಯಮಂತ್ರಿಯವರು ಹೇಳಲಿ.

ಶ್ರೀ ಬಿ. ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಯವರು): ಕೊಡಿಸುತ್ತೇನೆ.

ಶ್ರೀ ಎ. ಮಂಜು : ಕಳೆದ ಬಾರಿಯೂ ನನ್ನ ಪ್ರಶ್ನೆಗೆ ಇದೇ ಉತ್ತರವನ್ನೇ ಕೊಡಲಿಲ್ಲ.

ಅಧ್ಯಕ್ಷರು: ಈ ಸಲ ಕೊಡಿಸುತ್ತಾರೆ.

ರಾಜ್ಯದಲ್ಲಿ ಮಂಜೂರಾಗಿರುವ ಆಶ್ರಯ ಮನೆಗಳ ಬಗ್ಗೆ

26 (72) ಶ್ರೀ ಬಿ. ರಮಾನಾಥ್ ರೈ:(ಬಂಟ್ವಾಳ) ಮಾನ್ಯ ವಸತಿ, ವಾರ್ತಾ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ತ್ರಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಲಿ ಸಚಿವರು ಈ ಕಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ವಾರ್ಷಿಕ ವರ್ಷದಲ್ಲಿ ರಾಜ್ಯದಲ್ಲಿ ಮಂಜೂರಾಗಿರುವ ಆಶ್ರಯ ಮನೆಗಳ ಸಂಖ್ಯೆ ಎಷ್ಟು :